**<u>ಸಾಕ್ಷಿಯನ್ನು ದಿನಾಂಕ 22-09-2023 ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>**

<u>ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಹೆಚ್ ಎಸ್ ವಕೀಲರಿಂದ ವಾದಿಯ ಪರವಾಗಿ ಃ</u>

ಪ್ರತಿವಾದಿಗಳ ಸಹಿಗಳನ್ನು ನೋಡಿ ಗುರುತಿಸುತ್ತಿದ್ದು ಅವುಗಳನ್ನು ನಿಪಿ-1(ಎ) ದಿಂದ ನಿಪಿ-1(ಸಿ) ಎಂದು, ನನ್ನ ಸಹಿಗಳನ್ನು ನಿಪಿ-1(ಡಿ) ಯಿಂದ ನಿಪಿ-1(ಎಫ್) ಎಂದು, ಸಾಕ್ಷಿದಾರರಾದ ದೇವರಾಜ್ ನಾಯಕ್, ಹನುಮಂತಪ್ಪ ಉಪ್ಪಾರ, ಕಾಂತೆಪ್ಪ ಗುಂಡೂರು, ಲಕ್ಕಪ್ಪ ತೆಗ್ಗಿನ ಮನಿ ಮತ್ತು ಲಚಮಪ್ಪ ಭಾವಿಕಟ್ಟಿ ಇವರ ಸಹಿಗಳನ್ನು ನೋಡಿ ಗುರುತಿಸುತ್ತಿದ್ದು ಅವುಗಳನ್ನು ನಿಪಿ-1(ಜಿ) ಯಿಂದ ನಿಪಿ-1(ಕೆ) ಎಂದು, ಈರಮ್ಮ ತೆಗ್ಗಿನಮನಿ, ಮಹಾದೇವಿ ತೆಗ್ಗಿನಮನಿ, ಮಂಜುನಾಥ ತೆಗ್ಗಿನ ಮನಿ ಇವರ ಸಹಿಗಳನ್ನು ನೋಡಿ ಗುರುತಿಸುತ್ತಿದ್ದು, ಅವುಗಳನ್ನು ನಿಪಿ-1(ಎಲ್) ದಿಂದ ನಿಪಿ-1 (ಎನ್) ಎಂದು, ಸೋಮನಾಥ ವಕೀಲರ ಸಹಿ ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ-1(ಓ) ಎಂದು ಗುರುತಿಸಲಾಯಿತು. ಸದರಿ ನಿಪಿ-1 ದಾಖಲಾತಿಯಲ್ಲಿ ನನ್ನ ಹಾಗೂ ಪ್ರತಿವಾದಿಯ ಹಾಗೂ ಈರಮ್ಮ, ಮಹಾದೇವಿ, ಮಂಜುನಾಥ ಪೊಟೋಗಳು ಇರುತ್ತವೆ.

**<u>ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.